Regd No B G 155

13—10—1965

ಸತ್ಯವಾದಿ

49th Year
Satyavadi
DAILY
MYSORE 4

ಸಂ ಸ್ಥಾಪಕರು – ಅರಮನೆ ಸಿಂಸ್ಕೇದಾರ್ ಎಂ ವಿ ಸುಬ್ಬರಾಯುರು

ಸಂಪಾದಕರು – ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್

2 ಪೈಸೆ

ಸಬ್ ಮೆರೀನ್

ವೈರಿ ಲ್ಯಾಡಿನ ಅನಾ ಪೋಲಿಸು ನಿಂದ ಬಂದ ವಾರ್ತೆ ಮೂವತ್ತೊಂ ಬತ್ತು ಅಡಿ ಉದ್ದ ಆದರೆ ಎಂಟು ಅಡಿ ವ್ಯಾಸದ ಸಬ್‌ಮೆರೀನ್ ಗಳ ತಯಾರಿ ಆಗುತ್ತಿದೆ ಎಂದೂ, ಇವು ಮೂರುವರೆ ಸಾವಿರ ಅಡಿ ಆಳದ ವರೆಗೆ ಮೇಲುಗು ವಂತಿರುವುದೆಂದೂ, ಅದನ್ನು ನಡೆಸಲು ಮೂರು ಮಂದಿ ಬೇಕಾಗುವುದೆಂದೂ ವಂದಿಯಾಗಿದೆ

ರಕ್ಷಾಮಣಿಗೆ ಸಾವಿಲ್ಲ

ಡಾಡ್ಜ್‌ನ ಅರಿವಿನಿಂದ ಬಂದ ವಂದಿ ಅವಘಡ, ರೋಗರುಜಿನ ಮುಂತಾದವು ಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವ ಸಲುವಾಗಿ ಅನೇಕರು ತಾವು ತಿಗಳನ್ನು ಕಟ್ಟಿಕೊಳ್ಳುತ್ತಾರೆ ಅದೇ ಶ್ರೀರಕ್ಷೆ ಎಂದು ಅವರ ಭಾವನೆ. ಪುರುಷ ಸತ್ತು, ಅವನನ್ನು ಹೂತರೂ ರಕ್ಷಾಮಣಿ ಮಾತ್ರ ಹಾಗೆಯೇ ಉಳಿದಿರುತ್ತದೆ ಇತಿ ಹಾಸ ಪ್ರಸಿದ್ಧ ವ್ಯಕ್ತಿಯಾದ ಚಾರ್ಲ್ಸ್ ಮ್ಯಾಗ್ನೆಯುನ ಜೀವನಕ್ಕೆ ಸಂಬಂಧ ಪಟ್ಟ ಒಂದು ವಸ್ತು ಪ್ರದರ್ಶನವನ್ನು ಈ ಚೆಗೆ ಅವರು ವಾಸಿಸುತ್ತಿದ್ದ ಆಲೆನ್ ನಗರದಲ್ಲಿ ಏರ್ಪಡಿಸಲಾಗಿತ್ತು. ಅವರಿಗೆ ಸಂಬಂಧಪಟ್ಟ ಎಳನೂರು ವಸ್ತುಗಳನ್ನು ಅದ ರ್ಶಿಸಲಾಗಿತ್ತು. ಅಲ್ಲದೆ ಕ್ರಿಸ್ತಶಕ ಸುಮಾರಿನಲ್ಲಿ ಮೂರನೆಯ ಅಟೋ ಚಕ್ರ ವರ್ತಿಯ ಆದೇಶದ ಮೇಲೆ ಚಾರ್ಲ್ಸ್ ಮ್ಯಾಗ್ನೆ ಗೋರಿ ಅಗೆದಾಗ ಅವರು ಕುತ್ತಿಗೆಯಲ್ಲಿ ಧರಿಸಿದ್ದ ತಾಯಿತಿಯನ್ನೂ ಇಲ್ಲಿ ಪ್ರದರ್ಶಿಸಲಾಗಿತ್ತು !

— ಯೂ ಪಿ ಎಸ್

ನಾಳೆಯ ಪಂಚಾಂಗ

ದೈವಜ್ಞ ಶಿಖಾವಣಿ

ಶಸ್ತ್ರಿಸಪರಿವಾರವಿದ್ವಾನ್ ಧರ್ಮಾಧಿಕಾರಿ ರಾಜಕಾರಾಮ್ಯಪಕ್ಕ ಜ್ಯೋತಿರ್ವಿದ್ವನ್ಮಣಿ ಪಂಪಕೃಷ್ಣಜೋಯಿ ಸಂವಾರಿಂದ

4 ಗಂಟಾ ಬೌತಿ ಕೃತಿಕೆ (ಬೆ9-30)

ಪ್ರಮುಖ ವಾರ್ತೆಗಳು

ಹೈದಂಬಾತಾದಿನ ಹಣ್ಣು ಅಭಿವೃದ್ಧಿ ಕಾರ್ಪೊರೇಷನ್ ಅಶ್ರಯದಲ್ಲಿ ಕೇಂದ್ರದಲ್ಲಿ ಗೇರುಪೊಪ್ಪಿನ ಹಣ್ಣಿನಿಂದ ಬ್ರಾಂದಿ ತಯಾರಿಸುವ ಕಾರ್ಖಾನೆ ಸ್ಥಾಪಿಸಲಾಗುವುದೆಂದು ತಿರುಪತಿ ವಾರ್ತೆ

★

ವಿಂಗರೂರಿನಿಂದ ಬಂದಿರುವ ವಾರ್ತೆ ಎಲ್ಲಾ ಕಾರ್ಮಿಕರಿಗೂ ದಿನಕ್ಕೆ 50ಪೈಸೆ ಕಟ್ಟೋಷ್ಟ ಕೊಡಬೇಕೆಂದು ಸ್ವಸ್ಥಿ ಗೇರುಪೊಪ್ಪು ಕಾರ್ಖಾನೆಯ ಸಮಾಲೂ ಎಂಟನೂರು ಕೆಲಸಗಾರರು ಶನಿವಾರದ ದಿನದಿಂದ ಮುಷ್ಕರ ಹೂಡಿರುವರು

★

ಕಡೂರು ತಾಲ್ಲೂಕಿಗೆ ಎರಡು ವಿಧಾನ ಸಭೆ ಸ್ಥಾನಗಳನ್ನು ಕೊಡಬೇಕೆಂಬುದಾಗಿ ಮಾಡಿದ ರಾಜ್ಯದ ಸೂಚನೆಗೆ ಚುನಾವಣೆ ಸಮಿತಿ ಅನುಮೋದಿಸಿದೆ.

★

ಹಾಸನದಲ್ಲಿ ನವೆಂಬರ್ 1 ರಂದು ಜಿಲ್ಲಾ ಕೋರ್ಟ್ ಪ್ರಾರಂಭವಾಗುವ ಕುರಿತು ಒಂದು ಸ್ವಾಗತ ಸಮಿತಿ ಸ್ಥಾಪನೆ ಆಗಿದೆ ಸಮಾರಂಭಕ್ಕೆ ರಾಜ್ಯ ಪಾಲರು, ಮುಖ್ಯ ನ್ಯಾಯಾಧೀಶರು, ಮುಖ್ಯ ಮಂತ್ರಿಗಳನ್ನು ಆಹ್ವಾನಿಸಲು 7 ಮಂದಿಯ ನಿಯೋಗ ಕಳುಹಿಸಲು ನಿರ್ಧರಿಸಲಾಗಿದೆ

★

ತುಮಕೂರಿನ ಗಿಂಡಿ ಮಾಲೀಕರಾದ ಷೇಕ್ ಮಕಾಮದ್, ವರ್ತಕರಾದ ಮಹಮದ್ ಸೂಂಲತ್ತಾ ಮತ್ತು ಕಾಲ್ಕಂದಾರ್ ಷರೀಫ್ ರಕ್ಷಣಾ ವಿಧಿ ವೇರೆ ಬಂಧಿಸಲ್ಪಟ್ಟರು

★

ರಾಜ್ಯದಲ್ಲಿ ಕೆರೆಗಳಲ್ಲಿ ಮಣ್ಣು ತೆಗೆಯಲು ಉಪಯೋಗ ಟ್ರಾಕ್ಟರುಗಳನ್ನು ದೊರಕಿಸುವಂತೆ ಮೈಸೂರು ಸರ್ಕಾರ ಕೇಂದ್ರವನ್ನು ಕೇಳಿದೆ.

ಹಣ್ಣು ಮತ್ತು ತರಕಾರಿ ಹೆಚ್ಚು ತಿನ್ನಿ

ಧಾನ್ಯಗಳಗಿಂತ ಹೆಚ್ಚಾಗಿ ತರಕಾರಿ ಮತ್ತು ಹಣ್ಣುಗಳನ್ನು ತಿನ್ನಲು ಹೊರ ಟರೆ, ಆಹಾರ ಸಮಸ್ಯೆಯೂ ಪರಿಹಾರ ಆಗುವುದಲ್ಲದೆ ವಿದೇಶೀ ವಿನಿಮಯವೂ ಉಳಿಯುವುದೆಂದು ಜಿಲ್ಲಾಧಿಕಾರಿಯವರಾದ ಶ್ರೀ ಬಾಲರಾಜಾರವರು ಮಂಡ್ಯದಲ್ಲಿ ತಿಳಿಸಿದರು

ನೇತ್ರದಾನ

ಸರ್ಕಾರದ ನೇತ್ರ ಬ್ಯಾಂಕಿಗೆ ತಮ್ಮ ಕಣ್ಣನ್ನು ಉದಾರ ದಾನಮಾಡಲು ನಿನ್ನೆ ನೂರಿಪ್ಪತ್ತೈದು ಮಂದಿ ಬೋಬ ಯಿ ನಲ್ಲಿ ಪ್ರತಿಜ್ಞೆ ಮಾಡಿದರು ಆ ಪೈಕಿ ಭಾರತದ ಪ್ರಖ್ಯಾತ ಕ್ರಿಕೆಟ್ ಆಟಗಾರ ವಿಜಯ್ ಮರ್ಚೆಂಟ್‌ರೂ ಒಬ್ಬರು

ಅಮೆರಿಕೆಗೆ ಪ್ರಧಾನಿ

ಪ್ರಧಾನಿ ಶ್ರೀ ಲಾಲ ಬಹದ್ದೂರ್ ಶಾಸ್ತ್ರಿಯವರು ಮುಂದಿನ ತಿಂಗಳು ಅಮೆರಿಕಕ್ಕೆ ಭೇಟಿಕೊಡಬಹುದೆಂದು ಹೇಳ ಲಾಗಿದೆ.

ಪಾಕೀಸ್ತಾನದ ನಿರಂತರ ಅಕ್ರಮಣ ಕಾರ್ಯವೂ, ಅಕ್ರಮಣಕಾರಿಗೆ ಶಿಕ್ಷೆ ಯಾಗಿ ಮಾಡುವ ಇತರ ಪ್ರಯತ್ನ ವೂ ಭಾರತ ಪಾಕಿಸ್ತಾನದಲ್ಲಿ ಶಾಂತಿ ನೆಲೆಸಲು ಸಾಧ್ಯವಿಲ್ಲವೆಂದು ವಿಶ್ವಸಂಸ್ಥೆ ಯಲ್ಲಿ ಭಾರತ ವಿದೇಶ ಮಂತ್ರಿ ಸ್ವರ್ಣ ಸಿಂಗರು ವಿಶ್ವಸಂಸ್ಥೆಯಲ್ಲಿ ತಿಳಿಸಿದರು

ಂ ಂ

ಕಳೆದ 24 ಗಂಟೆಗಳಲ್ಲಿ ಶ್ರೀನಗರದಲ್ಲಿ 2 ಘಟನೆಗಳಲ್ಲಿ 4 ಮಂದಿ ಸತ್ತು 3 ಮಂದಿ ಗಾಯಗೊಂಡರು ಪಾಕೀಸ್ತಾನದ ಶೆಲ್‌ದಾಂಬು ಸಿಡಿತದಲ್ಲಿ ಒಬ್ಬ ಸತ್ತ, ಒಬ್ಬ ಗಾಯಗೊಂಡ ಹಿಂಸಾತ್ಮಕ ಗುಂಪು ಚದುರಿಸಲು ಪೋಲೀಸರು ಗುಂಡು ಹಾರಿಸಲು 3 ಜನ ಸತ್ತರು

ನಾನಾರ್ಥ ವಿಶೇಷಗಳು

★

ಪಾಕೀಸ್ತಾನ ಮಾಡುತ್ತಿರುವ ನಿರಂತರ ಕದನ ವಿರಾಮ ಉಲ್ಲಂಘನೆಯು ಹೀಗೆಯೇ ಮುಂದುವರಿದರೆ ಯುದ್ಧ ಅನಿವಾರ್ಯವೆಂದು ಕೃಷ್ಣಾ ಸಚಿವಾಲಯ ಅಭಿಪ್ರಾಯಪಟ್ಟಿರುವುದಾಗಿ ನವದೆಹಲಿ ವಾರ್ತೆ

ರಾಜ್ಯಗಳಲ್ಲಿ ಅಡಳಿತ ವೆಚ್ಚ ಶೇಕಡ 15 ರಷ್ಟು ಮೀರಿರಬಾರದೆಂದು ಪ್ರಧಾನಿಯವರು ಇಚ್ಛಿಸಿರುವರೆಂದು ಭಾರತದ ಹಣಕಾಸು ಮಂತ್ರಿಯವರೂ ಕಲ್ಕತ್ತಾದಲ್ಲಿ ನುಡಿದರು.

ಪೆಕಅಬ್ದುಲ್ಲರವರು ಪ್ರಧಾನಿ ಶಾಸ್ತ್ರಿಯವರಿಗೆ, ರಾಷ್ಟ್ರಪತಿ ಡಾ॥ ರಾಧಾಕೃಷ್ಣನ್‌ರಿಗೆ, ಶ್ರೀ ಜಯಪ್ರಕಾಶ ನಾರಾಯಣರಿಗೆ ಬರೆದಿರುವ ಕಾಗದದಲ್ಲಿ ಕದನವಿರಾಮ ಸ್ವಾಗತಿಸಿದ್ದರೂ ಸ್ವಯಂ ನಿರ್ಣಯಾತ್ಮಕ ಕ್ರಿಕೆನ ಪಲ್ಲವಿಯನ್ನು ಮತ್ತೆ ಹಾಡಿದ್ದಾರೆ

ಪಾಕೀಸ್ತಾನಕ್ಕೆ ಅಮೆರಿಕಾ ಮತ್ತೆ ಆಯುಧ ಸಂಬರಾಜು ಮಾಡಿದರೆ ಅದು ಸ್ನೇಹವಲ್ಲದ ಕೆಲಸವೆಂದು ಅಮೆರಿಕಾಕ್ಕೆ ಭಾರತ ಸ್ಪಷ್ಟವಾಗಿ ತಿಳಿಸಿದೆ

ಭಾರತ-ಪಾಕೀಸ್ತಾನಗಳ ಈಚಿನ ಘರ್ಷಣೆಯಲ್ಲಿ ಬ್ರಿಟೆ ತೋರಿಸಿದ ನಡವಳಿಕೆಯನ್ನು ತಿರುವೇಂದ್ರಂ ಕಾಲೇಜಿನ ವಿದ್ಯಾರ್ಥಿಗಳು ಪ್ರತಿಭಟಿಸಿ ಬ್ರಿಟಿಷ್ ಹೈ ಕಮೀಷನರಾದ ಜಾರ್ಜ್ ಫ್ರೀ ಮೆಂರವರ ಚಿತ್ರವನ್ನು ಪ್ರದರ್ಶನ ಮಾಡಿದರು

ಬೆಂಗಳೂರು ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭದ ಭಾಷಣ ವನ್ನು ಡಾ॥ ರಾಧಾಕೃಷ್ಣನ್ ಮಾಡುವ ನಿರೀಕ್ಷೆ ಇದೆ

ಹಿಂದಿನ ವರ್ಷಗಳಿಗಿಂತ ಭಾರತದ ಅಕ್ಕಿ ಉತ್ಪಾದನೆ ಶೇ 5 ಹೆಚ್ಚಿದೆ ರಾಗಿ ಉತ್ಪಾದನೆ ಶೇ 2-1 ಇಳಿದಿದೆ

ಆಹಾರ ಪದಾರ್ಥ ಕೊಡುವುದರೊಡನೆ ಮನೆಗೊಬ್ಬರಂತೆ ಸೇನೆಗೆ ಸೇರಿಸುವಂತೆ ಶ್ರೀ ವೀರೇಂದ್ರಗೌಡರು ರಾಷ್ಟ್ರಸಭೆಯಲ್ಲಿ ತಿಳಿಸಿದರು

ಪಂಡಿತರುಗಳಿಗೆ ಸನ್ಮಾನ

ಮೈಸೂರು— ಆಯು ರ್ವೇದ ವೈದ್ಯ ಸಂಘದವರು ತಾ || 22-10-65 ಶುಕ್ರವಾರ ನಡೆಸಿದ ಶ್ರೀ ಧನ್ವಂತರಿ ಜಯಂತಿ ಮಹೋತ್ಸವ ಸಂದರ್ಭದಲ್ಲಿ ಶ್ರೀಯುತರುಗಳಾದ (1) ಪ್ರಸಿದ್ಧ ವೈದ್ಯರಾದ ಆ || ವಿದ್ವಾನ್ ಪಂ || ಗೋಪಾಲ ಕೃಷ್ಣಾವಧಾನಿಗಳು, ಮೈಸೂರು (2) ಆಯು.ರ್ವೇದ ವಿದ್ವಾಂಸ ಶ್ರೀ ಸಂಹರರಾಯರು, ಪದ್ಮವೈದ್ಯಶಾಲಾ ನಂಜನಗೂಡು (3) ಶ್ರೀವತ್ಸಹಾರಿಂತಾಜಂವರು ಸಂಸ್ಕೃತ ಮಹಾವಿದ್ವಾಂಸರೂ ತರ್ಕತೀರ್ಥ ಪಾಠ್ಯಧಾಸ್ಯಕರಾಗಿ ವಿಶೇಷಾಂಕರಾದ ವಿದ್ವಾನ್ ಶ್ರೀ ತರ್ಕ ರಾವುಸ್ವಾವುಯ್ಯಂಗಾರ್ಯರು ಮೈಸೂರು— ಇವರುಗಳಿಗೆ ಇವರುಗಳ ವಿದ್ವತ್ಪಾಂಡಿತ್ಯ ಕೌಶಲ್ಯ ವಶ್ಯ ಆಯು.ರ್ವೇದಕ್ಕಾಗಿ ಮಾಡಿರುವ ಸೇವೆ ಇವುಗಳನ್ನು ಮೆಚ್ಚಿ ಸಂಘದವರು ಒಂದು ಸನ್ಮಾನ ಸಮಾರಂಭ ನಡೆಸಬೇಕೆಂದು ಸಂಘದವರು ನಿರ್ಣಯಿಸಿದ್ದಾರೆ

★

ವಿದ್ಯಾಕೇಂದ್ರ ನಾಲಂದಾ

– ಶ್ರೀ ಎಂ ಎಸ್ ನಂಜುಂಡಭಟ್, ಮಂಜೇಶ್ವರ –

— ಮುಂದುವರಿದುದು —

ಈ ನಾಲಂದಾ ವಿದ್ಯಾಲಯವು ಕ್ರಿಸ್ತಪೂರ್ವದ್ದೆಂದು ಹೇಳಿದರೂ, ಭೂಗರ್ಭ ಶೋಧನೆಯ ದೃಷ್ಟಿಯಿಂದ ಆ ಸ್ಥಳದ ಯಾವೊಂದು ವಿಷಯವೂ ಸಿಗದ ಕಾರಣ ಇದು ಕ್ರಿಸ್ತಶಕದ್ದೆಂದೇ ಪಂಡಿತರ ಅಭಿಪ್ರಾಯವಿದೆ, ಎಂತೂ ಕ್ರಿಸ್ತಶಕ ನಾಲ್ಕನೇ ಶತಮಾನದಿಂದ ಇದು ದೊಡ್ಡ ವಿದ್ಯಾಕೇಂದ್ರವೆಂದು ಪರಿಗಣಿಸಲ್ಪಟ್ಟಿತು; ಚೀನಾ ಯಾತ್ರಿಕರಾದ ಫಾಹಿಯಾನನೂ ಹುಯಿ ನ್ತ್ಸಾಂಗನೂ ಹೇಳುವುದೇನೆಂದರೆ, ಸಾರಿಪುತ್ರನ ಜನನಸ್ಥಳವೂ ಮರಣಸ್ಥಳವೂ ಇದೇ ಆಗಿತ್ತು; ಅಲ್ಲದೆ ಬುದ್ಧನ ಒಲಗೈಯಂತಿದ್ದ ಮಹಾಮಾಗ್ಡಲನು ಕೂಡ ಇಲ್ಲೇ ಜನಿಸಿದನ, ಅವನ ನಿರ್ವಾಣವೂ ಇಲ್ಲೇ ಆಯಿತು.

ಟಿಬೆಟ್ಟಿನ ಲಾಮಾ ಧರ್ಮವನ್ನು ಸ್ಥಾಪಿಸಿದ ಪದ್ಮಸಂಭವನು ನಾಲಂದಾ ವಿದ್ಯಾಲಯದ ಉಪಾಧ್ಯಾಶ್ರೇಷ್ಠರಾದ ಶಾಂತಿರಕ್ಷಿತನ ಶಿಷ್ಯನಾಗಿದ್ದನೆಂದು ತಿಳಿದುಬಂದಿದೆ: ಅವನು ಕ್ರಿ ಶ 747 ರಲ್ಲಿ ಟಿಬೆಟ್ಟಿಗೆ ಬೌದ್ಧಧರ್ಮ ಪ್ರಚಾರಕ್ಕೆಂದು ಆಲ್ಲಿಯ ರಾಜನ ಆಮಂತ್ರಣದ ಮೇರೆಗೆ ಹೋದನು

ಇದು ಅತೀ ದೊಡ್ಡ ವಿದ್ಯಾಕೇಂದ್ರವಾಗಿತ್ತಲ್ಲದೆ ಇದು ಬೌದ್ಧಧರ್ಮವನ್ನು ಅನುಸರಿಸಿಕೊಂಡಿತ್ತು; ಅದರೆ ಬ್ರಾಹ್ಮಣ ಧರ್ಮವನ್ನೂ ಕಲಿಸುತ್ತಿದ್ದರು; ಅದ್ದರಿಂದ ಬೌದ್ಧ ಯಾತ್ರಿಕನಾದ ಹುಯಿನ್ತ್ಸಾಂಗನು ಇಲ್ಲಿ ಐದು ವರ್ಷ ಕಾಲ ನಿಂತು ಎಲ್ಲಾ ವಿದ್ಯೆಯನ್ನೂ ಕಲಿತುಕೊಂಡನಲ್ಲದೆ, ಅವನ ಸಂಶಯ ಬಂದ ಇನ್ನೂರಾಗನು ಹತ್ತು ವರ್ಷ ಇಲ್ಲಿ ನಿಂತು ಇನ್ನೂ ಹೆಚ್ಚಿನ ವಿಷಯ ಕಲಿತು ಕೊಂಡನು

Help The Gorakshana

★

ಗೋಸಂರಕ್ಷಣೆಗೆ ಬೆಂಬಲ ನೀಡಿ

ಶ್ರೀ ದ್ವಾರಕಾ ಜಗದ್ಗುರು ಮಹಾಸನ್ನಿಧಿಗಳವರ ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿಧಿಗಳವರ ಆಶೀರ್ವಾದ ಅನುಗ್ರಹ ಕೃಪೆಯಾಗಿದೆ

ಕರ್ನಾಟಕದಲ್ಲಿ ಗೋಹತ್ಯೆ ನಿಷೇಧದಲ್ಲಿ, ತಾಪತ್ರಯಗಳು, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ ; ವಾರ್ಷಿಕ ಚಂದ 50 ನ್ಯೆಸೆ

ಸಹಾಯಕರು ರೂ 10, ಪ್ರೋತ್ಸಾಹಕರು: ರೂ 25 : (ಜೀವ ಸದಸ್ಯತ್ವ)

ಗೋಕ್ಷೇಮಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

ವುಡಲ್ಯಾಂಡ್ಸ್ ಜನಪ್ರಿಯ 3 ನೇ ವಾರ

ಶ್ರೀ

ಆವೊ ಪ್ಯಾರ್ ಕರೆ (ಹಿಂದಿ)

ಶ್ರೀ

Aao Pyar Karen

ಜಾಯ್ ಮುಖರ್ಜಿ — ಸೈರಾ ಬಾನು ರವರ ಕಲಾತ್ಮಕ ನಟನೆ

ಆಕರ್ಷಣೀಯ ಅಭಿನಯದಿಂದ ಕೂಡಿದ ಸುಂದರ ಹಿಂದಿ ಚಿತ್ರ

ಪ್ರತಿ ದಿನ 3 ಪ್ರದರ್ಶನಗಳು

ಅಪೆರ— ಅಮೋಘ 2 ನೇ ವಾರ

ಪ್ರತಿಜ್ಞಾ ಪಾಲನ (ತೆಲುಗು)

ಪಾತ್ರ– ಕಾಂತಾರಾವ್, ರಾಜನಾಲ, ಪದ್ಮನಾಭಂ, ರಾಜಶ್ರೀ, ವಿಜಯಲಕ್ಷ್ಮಿ

[ದಿನ 3 ಆಟಗಳು]

SHAKTI SUDHA

A Superb Tonic

Quality Printing — Neat Binding

Lakshminarasimha Press

Sivarampet, Mysore

ಆಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ಸಗ್ಗುಲ್ಲಿ ದೊರೆಯುತ್ತವೆ

ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Protect the Cow

ಗೋಸಂರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳಲ್ಲಿ ಹೆಚ್ಚಿಗಿ ಸಡೆಯಲಿ

Edited, Printed & Published by Dharma prachara nirathe
M S Krishna Rao (Proprietor) at the Satyavadi Press
Chamarajapuram, Mysore 4